CC-O. In Public Domain. Digitized by eGangotri

ಜಲಿಯನ್‌ವಾಲಾ ಬಾಗ್
1919 ರಲ್ಲಿ ಪಂಜಾಬಿನಲ್ಲಿ ಅಶಾಂತಿ ಮೂಡಿತ್ತು. ಬ್ರಿಟಿಷರ ಆಡಳಿತ ದಮನ-ಕಾರಿಯೂ ಮತ್ತು ಅದಕ್ಷಿತವೂ ಎಂದು ಅಮೃತಸರದ ಜನರು ಭಾವಿಸಿದ್ದರು.
ಬೆಲೆಗಳು ಏರಿ-ಹೋಗುತ್ತಿವೆ ಎನ್ನುತ್ತಿ-ದ್ದೀಯೆ. ಆದರೆ ನಾನೇನು ಮಾಡಬಲ್ಲೆ? ಸರ್ಕಾರ ತೆರಿಗೆ ವಸೂಲಿ ಮಾಡುತ್ತಿಲ್ಲವೇ?
ನಮಗೆ ಸಹಾಯಕ ವಾಗುವಂಥದ್ದೇ-ನನ್ನೂ ಸರ್ಕಾರ ಮಾಡುತ್ತಿಲ್ಲ!
ಅಣ್ಣಾ, ಸರ್ಕಾರ ಅದನ್ನು ಹೇಗೆ ತಾನೇ ಮಾಡೀತು? ಅದಕ್ಕೆ ಈ ಮಸೂದೆ ಆ ಮಸೂದೆ ಅಂಗಿಕರಿಸು-ವುದರಲ್ಲಷ್ಟೇ ಆಸಕ್ತಿ.
ಸರಿಯಾದ ಮಾತು. ಈಗ ರೌಲಟ್ ಬಿಲ್!
ಅದಕ್ಕೆ ಯಾರು ಸೊಪ್ಪು ಹಾಕುತ್ತಾರೆ? ನಾನಂತೂ ಬಗ್ಗುವವನಲ್ಲ.
ಅದು ಹಾಗಲ್ಲಪ್ಪ.
ಸರ್ಕಾರಕ್ಕೆ ಬೇಕೆನಿಸಿದರೆ, ನಿನ್ನನ್ನು ಸಂದೇಹಾ-ಸ್ಪದ ವ್ಯಕ್ತಿ ಎಂದು ಬಂಧಿಸಿ ಸೆರೆಮನೆಗೆ ಅಟ್ಟಬಹುದು. ರೌಲಟ್ ಶಾಸನ-ದಿಂದ ಸರ್ಕಾರಕ್ಕೆ ಈ ಅಧಿಕಾರ ದೊರಕಿದೆ.
ರೌಲಟ್ ಶಾಸನ ರಾಷ್ಟ್ರೀಯ ಅವಹೇಳನದ ಸಂಕೇತವೆಂದು ಗಾಂಧೀಜಿ ಹೇಳಿದ್ದಾರೆ!
ರಾಷ್ಟ್ರದ ಇತರ ಭಾಗದ ಜನರಂತೆ ಅಮೃತಸರದ ಜನರೂ ಗಾಂಧಿಯವರ ಮಾರ್ಗದರ್ಶನ ನಿರೀಕ್ಷಿಸತೊಡಗಿದರು.

Sri Vi... Book Centre, Sringeri

CC-O. In Public Domain. Digitized by eGangotri

ಅನುರಚಿತ ಕಥೆ

ಸುಪ್ರಸಿದ್ಧ ರೌಲಟ್ ಶಾಸನದ ವಿಧಿಗಳು ಚೆನ್ನಾಗಿ ತಿಳಿದ ಮೇಲೆ ಎಲ್ಲೆಲ್ಲೂ ಅಸಮಾಧಾನ ಬೆಳೆಯಿತು. ವಕೀಲರ ಒಂದು ಸಭೆಯಲ್ಲಿ-

ನಾವು ಮೂವತ್ತು ಕೋಟಿ ಭಾರತೀಯರು. ನಮ್ಮನ್ನು ಆಳುವ ಇಂಗ್ಲೀಷರ ಸಂಖ್ಯೆ ಎರಡು ಲಕ್ಷ ಮಾತ್ರ!

ನೀವು ಹೇಳುವುದು ಅರ್ಥವಾಗುತ್ತಿದೆ! ಬ್ರಿಟಿಷರೆಲ್ಲರಿಗೂ ಕೆನ್ನೆಗೆ ಎರಡು ಏಟು ಕೊಟ್ಟು ನಾವು ಹೊರದೂಡಬಲ್ಲೆವು!

ಇಲ್ಲ, ಅಹಿಂಸೆ ಸಲ್ಲ. ಆತ್ಮಗೌರವ ಮತ್ತು ಇತರರಿಗೂ ಗೌರವ ಕೊಡುವುದೇ ಗಾಂಧಿಯವರ ವಿಧಾನ.

ಹೀಗೆಂದವರು ಪ್ರಮುಖ ಗಾಂಧಿವಾದಿ ಡಾ. ಸೈಫುದ್ದೀನ್ ಕಿಚ್ಲು.

1919ರ ಮಾರ್ಚ್ ತಿಂಗಳಲ್ಲಿ ಹಲವಾರು ಸಭೆಗಳಾದವು. ಅಂಥ ಒಂದು ಸಭೆ ವಂದೇಮಾತರಂ ಸಭಾಂಗಣದಲ್ಲಿ ಜರುಗಿತು.

ಕೈಕೋಳ ಸರಪಣಿಗಳೇ ಇನ್ನು ನಿಮ್ಮ ಆಭರಣಗಳು. ಬಂದೀಖಾನೆಗಳೇ ನಿಮ್ಮ ದೇವಾಲಯ ಮತ್ತು ಮಸೀದಿ. ಆಗ ಸ್ವಾತಂತ್ರ್ಯ ನಿಮ್ಮ ಪದತಳದಲ್ಲಿರುತ್ತದೆ.

ಸಭೆಗಳಲ್ಲಿ ಗಾಂಧಿತತ್ವವನ್ನು ವಿವರಿಸಲಾಯಿತು. ಇಂಥ ಸಭೆಗಳಲ್ಲಿ ತುಂಬ ಪರಿಣಾಮಕಾರಿ ಭಾಷಣಕಾರ ಡಾ. ಸತ್ಯಪಾಲ್.

ಸತ್ಯಾಗ್ರಹ ಚಿತ್ತಶುಚಿಯ ಮಾರ್ಗ. ನಮ್ಮದು ಪವಿತ್ರ ಹೋರಾಟ. ಆದ್ದರಿಂದ ಇದನ್ನು ಚಿತ್ತಶುದ್ಧಿಯಿಂದಲೇ ಆರಂಭಿಸಬೇಕು. ಇದಕ್ಕಾಗಿ ಮಾರ್ಚ್ 30ರಂದು ಹರತಾಳ ನಡೆಸಬೇಕೆಂದು ಗಾಂಧೀಜಿ ಹೇಳಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಲಿಯನ್‌ವಾಲಾ ಬಾಗ್

1919ರ ಮಾರ್ಚ್ 30ರಂದು ಕೆಲಸ ಕಾರ್ಯಗಳಿಗೆ ಹೋಗದೆ ಇಡೀ ದಿನ ಪ್ರಾರ್ಥನೆ ನಡೆಸಲಾಯಿತು. ಅಂಗಡಿ-ಗಳೊಂದೂ ತೆರೆಯಲಿಲ್ಲ. ರಸ್ತೆ-ಗಳು ನಿರ್ಜನವಾಗಿದ್ದವು.

ಸಂಜೆ ಜಲಿಯನ್‌ವಾಲಾ ಬಾಗಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ 30,000 ಜನ ಸೇರಿದ್ದರು.

ಬ್ರಿಟಿಷರನ್ನು ನಾವಾರೂ ಈ ದೇಶಕ್ಕೆ ತಿಹ್ವಾನಿಸಿಲ್ಲ. ಅವರು ಇಲ್ಲಿರುವುದೂ ನಮಗೆ ಬೇಕಿಲ್ಲ.

ಸರ್ಕಾರ ರೌಲಟ್ ಶಾಸನದಂಥ ದಮನಕಾರಿ ಶಾಸನ-ಗಳನ್ನು ಮಾಡಿದಾಗ, ನಾವು ನಮ್ಮ ಆತ್ಮಸಾಕ್ಷಿಯ ಆದೇಶ ಮತ್ತು ಈಶ್ವರ ಆಜ್ಞೆಯಂತೆ ನಡೆದು ಶಾಸನ-ವನ್ನು ಧಿಕ್ಕರಿಸ-ಬೇಕು.

ನಾವು ಏನೇ ಆದರೂ ಶಕ್ತಿ ಪ್ರಯೋಗಿಸ-ಬಾರದು. ಸತ್ಯ ನಮ್ಮೊಡನೆ ಇದ್ದೇ ಇರಬೇಕು. ಸತ್ಯಕ್ಕೇ ಜಯ.

ಡಾಕ್ಟರ್ ಸಾಹೇಬ್! ಚೆನ್ನಾಗಿ ಹೇಳಿ-ದಿರಿ.

ಮಾರ್ಚ್ 30ರ ಸಭೆ ಸಂಪೂರ್ಣ ಯಶಸ್ವಿಯಾಯಿತು. ಹಿಂಸಾಕಾರ್ಯಗಳೇನೂ ನಡೆಯಲಿಲ್ಲ.

ನಾವೆಲ್ಲ ಸಾಮಾನ್ಯ ಜನರು... ಆದರೆ ಸ್ವಾತಂತ್ರ್ಯದ ಪ್ರೇಮದಿಂದ ಉನ್ಮತ್ತರು...

ಜೀವತೆತ್ತಾದರೂ ನಾವು ಸ್ವಾತಂತ್ರ್ಯವನ್ನು ಪಡೆಯುತ್ತೇವೆ. ಬಂದೂಕ, ಫಿರಂಗಿಗಳಿಗೆ ನಾವು ಹೆದರು-ವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಡೀ ರಾಷ್ಟ್ರ ತಯಾರಾಗಲು ಹರತಾಳವನ್ನು ಗಾಂಧೀಜಿ ಏಪ್ರಿಲ್ 6ನ್ನು ಮುಂದೂಡಿದರೆಂದು ತಮಗೆ ಸುದ್ದಿ ಬಂತು.

ನಾವೀಗ ಏನು ಮಾಡುವುದು?

ಅದಕ್ಕೇನೀಗ? ಏಪ್ರಿಲ್ 6 ರಂದು ಪುನಃ ಹರತಾಳ ನಡೆಸೋಣ. ಮೊದಲಿನದು ಪೂರ್ವಾಭ್ಯಾಸ ಎಂದುಕೊಳ್ಳೋಣ.

ಮೊದಲನೆಯ ಬಾರಿಯಂತೆಯೇ ಏಪ್ರಿಲ್ 6ರ ಹರತಾಳವೂ ಯಶಸ್ಸು ಪಡೆಯಿತು.

ಆ ದಿನ ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ 50,000 ಜನ ಸೇರಿದ್ದರು. ಡಾ. ಬದರುಲ್ ಇಸ್ಲಾಂ ಖಾನ್ ಅಧ್ಯಕ್ಷತೆ ವಹಿಸಿದ್ದರು.

ರೌಲಟ್ ಶಾಸನವನ್ನು ರದ್ದು ಪಡಿಸಬೇಕೆಂದು ಕೇಳಲು ನಾವಿಲ್ಲಿ ಸೇರಿದ್ದೇವೆ.

ಹೌದು. ರೌಲಟ್ ಶಾಸನವನ್ನು ರದ್ದುಪಡಿಸಿ!

ಆ ಕರಾಳ ಶಾಸನವನ್ನು ರದ್ದುಗೊಳಿಸಿ!

ಡಾ. ಸತ್ಯಪಾಲ್ ಮತ್ತು ಡಾ. ಕಿಚ್ಲು ಸಭೆಯಲ್ಲಿ ಮಾತನಾಡಲಿಲ್ಲ. ಅವರು ಸಾರ್ವಜನಿಕ ಭಾಷಣಗಳನ್ನು ಮಾಡಬಾರದೆಂದು ಸರ್ಕಾರ ಪ್ರತಿಬಂಧಿಸಿತ್ತು.

ಈ ಸಭೆಯಲ್ಲಿ ಡಾ. ಸತ್ಯಪಾಲ್ ಮತ್ತು ಡಾ. ಕಿಚ್ಲು ಭಾಷಣ ಮಾಡುವುದನ್ನು ನಿಷೇಧಿಸಿರುವ ಸರ್ಕಾರಿ ಆಜ್ಞೆಯು ರದ್ದಾಗಬೇಕು!

ಸತ್ಯಪಾಲ್ ಜಿಂದಾಬಾದ್!

ಡಾ. ಕಿಚ್ಲು ಜಿಂದಾಬಾದ್!

Sri Vi[illegible]rathi Book Centre, Delhi

CC-O. In Public Domain. Digitized by eGangotri

ಅಮೃತಪರದ ಜಿಲ್ಲಾಧಿಕಾರಿ ಇಬ್ರಿಂಗ್ ಚಿಂತೆಗೊಳಗಾಗಿದ್ದ.

ಹೂಂ, ಶಿಬುನ ಮತ್ತು ಸತ್ಯಪಾಲ್ ಜನರಲ್ಲಿ ಭಾರಿ ವರ್ಚಸ್ಸನ್ನು ಪಡೆದಿದ್ದಾರೆ. ಹರತಾಳಕ್ಕೆ ಇವರೊಂದು ಕರೆ ಕೊಟ್ಟರೆ ಜನ ಅದನ್ನು ಪಾಲಿಸುತ್ತಾರೆ.....

ಆ ದಿನ ಶಾಂತವಾಗಿ ಕಳೆಯಿತು. ಆದರೆ ಜಿಲ್ಲಾಧಿಕಾರಿಯ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಏಕೆಂದರೆ ಮುಂದಲ ಹೆಜ್ಜೆ, ಶಕ್ತಿ ಪರೀಕ್ಷೆ. ಮುಂದಿನದು ಇನ್ನೂ ಹೆಚ್ಚು ಉದ್ರವಾಗಿರಬಹುದೆ ಎಂದು ಅವನಿಗೆ ಮನವರಿಕೆಯಾಗಿತ್ತು.

ದಂಡೆ ಏನಾದರೂ ಆರಂಭವಾದರೆ ನಮ್ಮ ಕಾವಲು ಪಡೆಯಿಂದ ಸಿವಿಲ್ ಜೀವನವನ್ನು ರಕ್ಷಿಸಿಕೊಳ್ಳಲೂ ಆಗದು. ನಗರದ ಬಹುಭಾಗವನ್ನು ನಾವು ಕಳೆದುಕೊಳ್ಳಬೇಕಾಗುತ್ತದೆ.!

ಆದ್ದರಿಂದ ಹೆಚ್ಚುವ ಪಡೆಯನ್ನು ಕಳಿಸುವಂತೆ ಅವನು ತನ್ನ ಮೇಲಧಿಕಾರಿಗೆ ಬರೆದ.

ಏಪ್ರಿಲ್ 9ರಂದು ರಾಮನವಮಿ. ಎಷ್ಟೋ ವರ್ಷಗಳನಂತರ ಮೊದಲ ಬಾರಿ ಹಿಂದೂಗಳ ಈ ಹಬ್ಬದಂದು ಸೈನ್ಯ ಧರ್ಮೀಯರ ಸುವ್ಯವಸ್ಥಿತ ಮೆರವಣಿಗೆ ನಗರದ ಕಿಷ್ಕಿಂದ ರಸ್ತೆಗಳಲ್ಲಿ ನಡೆಯಿತು.

ಗಾಂಧಿ ಮಹಾತ್ಮರಿಗೆ ಜಯವಾಗಲಿ

ಶಿಬುನ್ಹರವರಿಗೆ ಜಯವಾಗಲಿ.

ಸತ್ಯಪಾಲರಿಗೆ ಜಯವಾಗಲಿ.

ಹಿಂದೂಗಳು ಮುಸ್ಲಿಮರು ಕೊಟ್ಟ ನೀರನ್ನು ಬಹಿರಂಗವಾಗಿ ಕುಡಿದರು.

ಹಿಂದು-ಮುಸ್ಲಿಮರಿಗೆ ಜಯವಾಗಲಿ!

ಹಿಂದು ಮುಸ್ಲಿಮರಿಗೆ ಜಯವಾಗಲಿ!

ಜಿಲ್ಲಾಧಿಕಾರಿ ಈ ದೃಶ್ಯಗಳನ್ನೆಲ್ಲ ಒಂದು ಕಬ್ಬಡದ ಮೊಗಸಾಲೆಯಿಂದ ನೋಡಿದ.

ಈ ಎರಡು ಸೋಮುಗಳಲ್ಲಿ ಭ್ರಾತೃಭಾವ - ಇದೊಂದು ಕೆಟ್ಟ ಶಕುನ....

CC-O. In Public Domain. Digitized by eGangotri

ಜಿಲ್ಲಾಧಿಕಾರಿ ಮೇಲಿನ ಮೊಗಸಾಲೆಯಲ್ಲಿ ಕಾಣಿಸಿಕೊಂಡಾಗ "ದೇವರು ದೊರೆಯನ್ನು ಕಾಪಾಡಲಿ" ಎಂದು ಬ್ಯಾಂಡ್ ವಾದ್ಯ ನುಡಿಸಿತು.

ಇಲ್ಲೇನೋ ಎಡವಟ್ಟಾದಂತಿದೆ. ಇವರೆಲ್ಲ ನಮ್ಮನ್ನು ಮೂದಲಿಸುತ್ತಿರಬೇಕೆಂದು ಸಂದೇಹ!

ಆದರೆ ಬಹುಮಟ್ಟಿಗೆ ಜನಸಮೂಹ ಶಿಸ್ತಿನಿಂದ ನಡೆದುಕೊಂಡಿತು.

ಅದೇ ದಿನ ಸಂಜೆ ಜಿಲ್ಲಾಧಿಕಾರಿ ಇರ್ವಿಂಗ್ ತನ್ನ ನಿವಾಸಕ್ಕೆ ಹಿಂದಿರುಗಿದಾಗ-

ಡಾ. ಸತ್ಯಪಾಲ್ ಮತ್ತು ಡಾ. ಕಿಚ್ಲುರನ್ನು ಧರ್ಮಶಾಲ್*ಗೆ ಗಡೀಪಾರು ಮಾಡಬೇಕೆಂದು ಜನರಲ್ ಓ' ಡ್ವೈಯರ್ ಆದೇಶಿಸಿದ್ದಾರೆ!

ಇರ್ವಿಂಗ್ ತನ್ನ ನಿವಾಸದಲ್ಲೇ ಹಿರಿಯ ಅಧಿಕಾರಿಗಳ ಸಭೆ ಕರೆದ.

ನಾವೇನಾದರೂ ಡಾ. ಕಿಚ್ಲು ಮತ್ತು ಡಾ. ಸತ್ಯಪಾಲರನ್ನು ಗಡೀಪಾರು ಮಾಡುವುದರ ಸುಳಿವು ಜನರಿಗೆ ತಿಳಿದರೆ ತೊಂದರೆ ಖಂಡಿತ. ನಾವೇನು ಮಾಡಬೇಕು? ಏನಾದರೂ ಸಲಹೆಗಳಿವೆಯೆ?

ತುಂಬ ಚರ್ಚೆಯಾದನಂತರ ಒಂದು ವ್ಯೂಹ ರಚನೆಯಾಯಿತು.

ಸರಿ! ಹಾಗಾದರೆ ರೈಲು ನಿಲ್ದಾಣ, ದಂಡು ಪ್ರದೇಶ, ಸಿವಿಲ್ ಲೈನ್ ಎದುರಿಗೆ ಅಶ್ವಾರೋಹಿ ಸೇನೆಯ ಕಾವಲು ಇರಿಸೋಣ....

...ಒಂದು ಕಾಪು ಪಡೆಯನ್ನು ಮೀಸಲಾಗಿಟ್ಟು ಇನ್ನೂ 75 ಮಂದಿ ಇರುವ ಸಶಸ್ತ್ರ ದಳವನ್ನು ಠಾಣೆಯ ಬಳಿ ಇಡೋಣ







Sri Vidyabharathi Book C

* ಈಗ ಹಿಮಾಚಲ ಪ್ರದೇಶದಲ್ಲಿ

CC-O. In Public Domain. Digitized by eGangotri

ಡಾ. ಕಿಚ್ಲು ಮತ್ತು ಡಾ. ಸತ್ಯಪಾಲರನ್ನು ಏಪ್ರಿಲ್ 10ರಂದು ಚರ್ಚೆಗೆ ಎಂಬ ನೆಪವೊಡ್ಡಿ ಜಿಲ್ಲಾಧಿಕಾರಿಗಳ ನಿವಾಸಕ್ಕೆ ಬರಮಾಡಿಕೊಳ್ಳಲಾಯಿತು.

ತಕ್ಷಣ ಅವರಿಬ್ಬರನ್ನೂ ಪ್ರತ್ಯೇಕ ಮೋಟಾರು ಗಾಡಿಗಳಲ್ಲಿ ಕೂಡಿಸಿ ಬೇರೆಡೆ ಹೊರಟ ರುಂಪಿನಂತೆ ವೇಷ ಮರೆಸಿಕೊಂಡ ಬ್ರಿಟಿಷರ ಬಿಂಗಾವಲಿನಲ್ಲಿ ಸಾಗುಹಾಕಲಾಯಿತು.

ಈ ಎಲ್ಲಾ ಮುನ್ನೆಚ್ಚರಿಕೆಯಿದ್ದೂ ಕೂಡ ಒಂದು ಗಂಟೆಯೊಳಗಾಗಿ ವದಂತಿ ಹಬ್ಬಿತು.

ಡಾ. ಸತ್ಯಪಾಲ್ ಮತ್ತು ಕಿಚ್ಲುರನ್ನು ಇಲ್ಲಿಂದ ಗಡೀಪಾರು ಮಾಡಿದ್ದಾರೆ!

ಉದ್ರಿಕ್ತ ಜನರು ರಸ್ತೆಗಿಳಿದು ಪ್ರತಿಭಟಿಸ-ತೊಡಗಿದರು.

ನಮ್ಮ ನಾಯಕರನ್ನು ಬಂಧಿಸಲಾಗಿದೆ! ನಿಮ್ಮ ಅಂಗಡಿಗಳನ್ನು ಮುಚ್ಚಿ!

ಎಲ್ಲ ವ್ಯಾಪಾರವನ್ನು ನಿಲ್ಲಿಸಿ!

ಬಹುಬೇಗ ಚಿಕ್ಕದಾಗಿದ್ದ ಜನರ ರುಂಪು ಬೆಳೆದು 50,000 ಜನರ ಸಮೂಹವೇ ತಯಿತು. ಅವರೆಲ್ಲರೂ ಸಾಧಾರಣ ನಿಶಸ್ತ್ರ ನಾಗರಿಕರು.

ನಾವು ಜಿಲ್ಲಾಧಿಕಾರಿಗಳಲ್ಲಿಗೆ ನೇರವಾಗಿ ವಿನಂತಿ ಸಲ್ಲಿಸೋಣ!

ಈ ಗಡೀಪಾರು ಆಜ್ಞೆಯನ್ನು ಅವನು ರದ್ದು ಮಾಡಲೇ ಬೇಕು.

Vishwabharathi Book Centre, Sringeri

CC-O. In Public Domain. Digitized by eGangotri





By Vidyabharathi Book Centre, Shimoga

CC-O. In Public Domain. Digitized by eGangotri

ಅವರಿನ್ನೂ ಸೇತುವೆಯ ಇನ್ನೊಂದು ಬದಿ ತಲಪುವ ಮೊದಲೇ ಅಶ್ವಾರೋಹಿ ದಳ ಹತಾಶಗೊಂಡಂತೆ ಹಿಂದಿರುಗಿ ಗುಂಡಿನ ದಾಳ ಆರಂಭಿಸಿತು.

ಧಮ್ಮಾರ್!

ಮೂರ್ನಾಲ್ಕು ಮಂದಿ ಸತ್ತರು. ಹಲವರಿಗೆ ಗಾಯವಾದವು...

ಕಾಪಾಡಿ!

ಅವನಿಗೆ ಗುಂಡು ತಗುಲಿದೆ!

ಜನರು ಉದ್ರೇಕಗೊಂಡು ರಸ್ತೆಯ ದುರಸ್ತಿಗಾಗಿ ಬದಿಯಲ್ಲಿ ಗುಡ್ಡೆ ಮಾಡಿದ್ದ ಕಲ್ಲುಗಳನ್ನು ಎತ್ತಿ ಸೇನೆಯತ್ತ ಬಿಸುಡತೊಡಗಿದರು.

ನಾವು ಐದಾರು ನಾಯಕರನ್ನು ಪಡೆಯಲೇ ಬೇಕು....

...ಇಲ್ಲವೇ ನಾವು ಸಾಯಲೂ ಸಿದ್ಧ!

ಆದ ಇಬ್ಬರು ಅಶ್ವಾರೋಹಿ ದಳ ಕೆಳಗಿಳಿದು ಚರಂಡಿಯ ಬದಿಯಲ್ಲಿ ಅಡಗಿಕೊಂಡು ಗೋಲಿಬಾರ್ ನಡೆಸಿದರು.

ಆರೇಳು ಗುಂಡುಗಳು ಹಾರಿದ ಮೇಲೆ ಗುಂಪಿನ ಚಟುವಟಿಕೆ ಸ್ತಬ್ಧವಾಯಿತು. ಹಲವರು ಕೆಳಗುರುಳಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರಲ್ಲಿ ತುಂಬಾ ಗಾಯಗೊಂಡು ಬಿದ್ದಿದ್ದ ಒಬ್ಬ 16 ವರ್ಷದ ಬಾಲಕನ ನೆರವಿಗೆ ಡಾ. ಧವಪತ್ ರಾಯ್ ಧಾವಿಸಿದರು. ತದನಂತರ ಅವನು ಅವರಿಗೆ ಪಕ್ಷಪಕ್ಷ ಹೋದುವಂತೆ ಹೇಳಿದ.

ನಾನೇನೋ ಸಾಯುತ್ತಿದ್ದೇನೆ. ನನ್ನ ಬದಲು ನನ್ನ ಉಳಿದ ಸೋದರರಿಗೆ ಸಹಾಯ ಮಾಡಿ.

ಹಿಂದು - ಮುಸ್ಲಿಮರಿಗೆ ಜಯ - ವಾಗಲಿ!

ಮರುಕ್ಷಣವೇ ಆತ ಸಾವನ್ನಪ್ಪಿದ.

ಈ ವೇಳೆಗೆ ಬೇರೆ ಸ್ಥಳಗಳಲ್ಲೂ ಜನರು ಕಲ್ಪಿತರಾಗಿದ್ದರು. ಎಟ್‌ಚೆನ್ಸನ್ ಪಾರ್ಕಿನ ಬಳಿ 30,000ಕ್ಕೂ ಹೆಚ್ಚು ಜನ ನೆರೆದಿದ್ದರೂ, ಅವರನ್ನು ಶಾಂತಿಯಿಂದ ಇರುವಂತೆ ಪ್ರಮುಖರು ಸೂಚಿಸಿಕೊಂಡರು.

ದಯವಿಟ್ಟು ಹಿಂಸೆ ಬೇಡ. ಅವರು ನಮ್ಮ ಮೇಲೆ ಗುಂಡಿನ ದಾಳಿ ನಡೆಸಲು ಅವಕಾಶ ಕೊಡಬೇಡಿ.

ಈ ಸಮೂಹದ ಒಂದು ಭಾಗ ಫುಟ್ ಬ್ರಿಡ್ಜ್‌ನ ವರೆಗೆ ಹಬ್ಬಿಕೊಂಡಿತ್ತು.

ಇದ್ದಕ್ಕಿದ್ದಂತೆ ಅಲ್ಲಿದ್ದ ಸೈನ್ಯ ಶಾವಲು ಪಡೆ ಎದುರಾಯಿತು. ಒಂದು ಕ್ಷಣ ಅಳುಕಿದರೂ....

Sri Vidyaniketan Book Trust, Surat

CC-O. In Public Domain. Digitized by eGangotri

...ಜನಸಮೂಹ ಮುಂದುವರಿಯತೊಡಗಿತು. ಸೈನಿಕರ ಮೇಲೆ ಕೆಲವರು ಕಲ್ಲೆಸೆಯ-ತೊಡಗಿದರು.

ನಮ್ಮನ್ನು ಮುಂದೆ ಹೋಗಲು ಬಿಡಿ.

ನಾವು ಜಿಲ್ಲಾಧಿಕಾರಿಗಳನ್ನು ಕಾಣಬೇಕು!

ಈ ತಡೆ ಪರ್ಯಾವಿನ ಉಸ್ತುವಾರಿ ವಹಿಸಿದ್ದು ಪೋಲೀಸ್ ಡಿಪ್ಯುಟಿ ಸೂಪರಿಂಟೆಂಡೆಂಟ್ ಪ್ಲೊಮರ್.

ಹಿಂದಕ್ಕೆ ಸರಿಯಿರಿ! ನೀವು ನನ್ನ ಆಜ್ಞೆ ಮೀರಿದರೆ ಗುಂಡು ಹಾರಿಸುತ್ತೇವೆ.

ಕೆಲವು ಅಧಿಕಾರಿಗಳು ತಕ್ಷಣ ಹೊಗಿ ಹೇಳಿದರು-

ಸರ್, ಗೋಲಿಬಾರ್ ಮಾಡಬೇಡಿ!

ನಾವು ಜನರನ್ನು ಊರಿಗೆ ಮರಳಿ ಕಳುಹಿಸಿಕೊಡುತ್ತೇವೆ.

ಏಪ್ರಿಲ್ 10 ರಂದು ಮಧ್ಯಾಹ್ನ 12.30 ರ ವೇಳೆಗೆ ಎಲ್ಲೆಲ್ಲೂ ಜನರೇ ಕಾಣಿಸುತ್ತಿದ್ದರು. ಹ್ಯಾರೀಜ್ ಬ್ರಿಡ್ಜ್ ಮೇಲೆ....

...ಪುಟ್ ಬ್ರಿಡ್ಜ್ ಮೇಲೆ....

Sri Vidyabharathi Book Centre, Sirsi

CC-O. In Public Domain. Digitized by eGangotri

Sri [illegible] Book Centre, [illegible]

CC-O. In Public Domain. Digitized by eGangotri







Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಸ್ಥಳದಲ್ಲಿ ವಿಕ್ಟೋರಿಯಾ ರಾಣಿ ಪ್ರತಿಮೆಯ ಮೇಲೆ ದಾಳಿ ನಡೆಯಿತು. ಆದರೆ-

ಬಡ ಹೆಂಗಸಿನ ಮೇಲೇಕೆ ದಾಳಿ? ಅವಳು ಒಳ್ಳೆ-ರಾಣಿಯಾಗಿ-ದ್ದಳು!

ಹಾಗೇ ಆಗಲಿ. ನಾವು ಮುಂದುವರಿ-ಯುವಾ!

ಆದರೆ ಅನೇಕ ಸ್ಥಳಗಳಲ್ಲಿ ಜನರ ಗುಂಪು ವಿವೇಕವನ್ನೇ ಕಳೆದುಕೊಂಡಿತ್ತು. ಕೂಚಾ ಕೌಡಿಯಾವಾಲಾ ರಸ್ತೆಯಲ್ಲಿ ಸೈಕಲ್ ಮೇಲೆ ಸಾಗುತ್ತಿದ್ದ ಇಂಗ್ಲೀಷ್ ಮಹಿಳೆ ಷೆರ್‌ವುಡ್‌ಳನ್ನು ಪುಂಡರ ತಂಡ ಎಡಬಿಡದೆ ಕಾಡಿತು.

ಆಕೆಯನ್ನು ಸೈಕಲ್ಲಿನಿಂದ ಕೆಳಗೆಳೆದು ನಿಷ್ಕರುಣೆ-ಯಿಂದ ಚಚ್ಚಿದರು.

ಅವಳು ಸತ್ತಳು!

ನಡೆಯಿರಿ! ನಡೆಯಿರಿ! ಹೋಗೋಣ!

ಅವಳನ್ನು ಅದೇ ಸ್ಥಿತಿಯಲ್ಲಿ ಬಿಡ-ಲಾಗಿತ್ತು. ಆಮೇಲೆ ಅಂಗಡಿ ಮಾಲೀಕನೊಬ್ಬ ಅವಳ ಸ್ಥಿತಿ ಕಂಡು ಪ್ರಥಮ ಚಿಕಿತ್ಸೆ ನೀಡಿದ.

ಆದರೆ ಇದಾದನಂತರವೂ ಬಹು ದೀರ್ಘಕಾಲ ತೀವ್ರವಾಗಿ ಖಾಯಿಲೆ ಬೀಳುವಷ್ಟು ಆಕೆಯ ದೇಹಸ್ಥಿತಿ ಕೆಟ್ಟಿತ್ತು.

ನಗರ ಯೂರೋಪಿಯನ್ನರಿಗೆ ಅಭದ್ರವೆನಿಸಿತು. ಸಿವಿಲ್ ಸರ್ಜನ್ ಆಗಿದ್ದ ಲೆಫ್ಟಿನೆಂಟ್ ಕರ್ನಲ್ ಹೆನ್ರಿ ಸ್ಮಿಥ್ ಯೂರೋಪಿಯನ್ ಮಹಿಳೆಯ-ರನ್ನೂ, ಮಕ್ಕಳನ್ನೂ ಗೋವಿಂದಗಢ ಕೋಟೆಗೆ ಕಸ್ತ್ರಪಡೆಯ ಬೆಂಗಾವಲಿನಲ್ಲಿ ಕಳಿಸಿದ.

ಆ ದಿನ ಸಂಜೆಯ ವೇಳೆಗೆ ಆ ಕೋಟೆಯೊಳಗೆ ಅವರಿಗೆಲ್ಲ ರಕ್ಷಣೆ ಒದಗಿಸಲಾಗಿತ್ತು.

Sri Vidyabharathi Book Centre, Sringeri

CC-0. In Public Domain. Digitized by eGangotri









CC-0. In Public Domain. Digitized by eGangotri



Sri Vidyabharathi Book Centre, Sringeri

CC-0. In Public Domain. Digitized by eGangotri

You'd be surprised!"

"When I was getting ready to play my first test, someone I admired said to me, 'Get careless about your kit and turnout and you'll soon get careless about the game as well!'

It made a lot of sense to me then. And it still does today.

Sure, you want to put all your time and energy into getting better and better at the game. But don't forget, you're a sportsman first. And what kind of sportsman would you be if you couldn't spare a bit of time to look like one?

Take it from me, when you come perfectly dressed, you feel good, you feel like a sportsman—you feel like a winner!

Is it a wonder then, that a white shoe cleaner matters so much to me... even after a 100 tests!



Be a sportsman... down to your feet!"

CHERRY WHITE CLEANER

LINTAS(C)/CBWC/32/2537

CC-O. In Public Domain. Digitized by eGangotri

OMEGA Sony

gives you perfection!

Perfect circles

Exact angles



Accurate parallels



Precise lengths

Winner of Top PLEXCONCIL EXPORT AWARD– 1978-79-80-81-82-83-84

Omega– The ultimate in quality

Allied Instruments Pvt. Ltd.,
30-CD Government Industrial Estate,
Kandivli (West), Bombay-400 067.
Phone: 692425 • 685068 • 696721 • 697188
Telex: 011-3069 AIPL • Cable: ARTCORNER

Also Available:
Omega Eagle
Omega Glory
Omega Glory-86
Omega Liba-
Omega World Time

Distributors: GREATER BOMBAY: M/s. D. Jagjivandas & Company, 177, Abdul Rehman Street, BOMBAY-400 003. Tel. 326524 * MAHARASHTRA: M/s. A. Aalok & Co., 107, Regal Industrial Estate, Acharya Donde Marg, Sewree (West), BOMBAY-400 015. Tel.: 8823295, 8823215 * GUJARAT: M/s. N. Chimanlal & Company, Jasmine Bldg., Khanpur, AHMEDABAD. Tel.: 395198 * DELHI, HARYANA, PUNJAB, J.K. & HIMACHAL PRADESH: M/s. Bharati Traders, C/o. Kirparam Sethi & Sons, 89, Chawri Bazar, DELHI-110 006 Tel.: 262854 * KARNATAKA, ANDHRA PRADESH & GOA: M/s. Sanghvi Corporation, "Suresh Building", First Floor, No. 17, 4th Cross, Kalasipalayam, New Extension, BANGALORE 560 002. Tel.: 225702. * CALCUTTA & WEST BENGAL: M/s. Sanghvi Corporation, 14/1/A, Jackson Lane, IInd Floor, Calcutta-700 001. Tel.: 262141. * UTTAR PRADESH: M/s. Sanghvi Corporation, 7 A, Balmiki Marg, Kaisa[illegible] TAMILNADU: Sanghvi Corporation, 35 Strotten Muthia Mudali Street, 1st Floor, MADRAS-600 079.
* REST OF INDIA: M/s. Sanghvi Corporation, 107, Regal Industrial Estate, Acharya Donde Marg, Sewree (West), BOMBAY-400 015. Tel.: 8823295-8823215.

Sri Vidyabharati Book Centre, Sringeri

CC-0. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಏಪ್ರಿಲ್ 11ರಂದು ರಾತ್ರಿ 9 ಗಂಟೆ, ಅಮೃತಸರಕ್ಕೆ ಬ್ರಿಗೇಡಿಯರ್ ಜನರಲ್ ಡಯರ್ ಆಗಮಿಸಿದ. ತಕ್ಷಣವೇ ಆತ ರೈಲ್ವೆ ಜೂನಿಯರ್‌ಅಂದರಲ್ಲಿ ಜಿಲ್ಲಾಧಿಕಾರಿ ಮತ್ತು ಪೋಲೀಸ್ ಅಧಿಕಾರಿಯ ಜೊತೆ ಸಮಾಲೋಚಿಸಿದ.

ಇಡೀ ನಗರ ಬ್ರಿಟಿಷರ ವಿರೋಧವಾಗಿದೆ. ನಮ್ಮನ್ನು ಲಗ್ನ ಹತ್ತಿದ್ದಾರೆ. ನಾಗರಿಕ ಆಡಳಿತ ಕುಸಿದು ಹೋಗಿದೆ. ಈಗ ಇಡೀ ನಗರ ನಿಮ್ಮ ಆಡಳಿತದಲ್ಲಿದೆ. ನಿಮಗೇನು ಸಾಧ್ಯವೋ ಮಾಡಿ.

ಅದರಂತೆ ಏಪ್ರಿಲ್ 12ರ ಮುಂಜಾನೆ ನಗರದ ಹತೋಟಿ ಡಯರ್‌ನ ವ್ಯಾಪ್ತಿಗೆ ಸೇರಿತು.

ನಾನಾ ರಸ್ತೆಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ತಿಳಿಯಲು ನಗರದ ಮೇಲೆ ವಿಮಾನ ಹಾರಾಟ ನಡೆಸಲಿ.

ವೈಮಾನಿಕ ವೀಕ್ಷಣೆಯ ವರದಿಯೂ ಬೇಗ ಬಂದಿತು.

ಸರ್, ನಗರದ ನಾನಾ ಭಾಗಗಳಲ್ಲಿ ಜನ ಗುಂಪುಗೂಡಿದ್ದಾರೆ.

ಸರಿ, ನಾವು ಆಯಕಟ್ಟಿನ ಸ್ಥಳಗಳಲ್ಲಿ ಅಂದರೆ ಸೇತುವೆಗಳು, ಹೆಬ್ಬಾಗಿಲುಗಳು ಮತ್ತು ನೀರು ಪೂರೈಕೆ ಕೇಂದ್ರಗಳನ್ನು ವಶಪಡಿಸಿಕೊಂಡು ಹತೋಟಿ ಸಾಧಿಸಬೇಕು.

ಬೆಳಿಗ್ಗೆ 10 ಗಂಟೆ ಸಮಯಕ್ಕೆ ಡಯರ್ ನಗರದ ಜನರ ಮೇಲೆ ಪ್ರಭಾವ ಬೀರಲು ಬ್ರಿಟಿಷ್ ಶಕ್ತಿ ಪ್ರದರ್ಶನದ ಮೆರವಣಿಗೆ ನಡೆಸಿದ.

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri







Sri Vidyabharathi Book Centre, Sringeri

Kan. ACK 358

CC-O. In Public Domain. Digitized by eGangotri

ಡಯರ್‌ನಿಗೆ ರೆಹಿಲ್‌ನ ಸಂದೇಶ ತಲಪುವ ವೇಳೆಗಾಗಲೇ ಜಲಿಯನ್‌ವಾಲಾ ಬಾಗಿನ ಮುಖ್ಯದ್ವಾರದ ಮೂಲಕ ಅಪಾರ ಜನ ಸೇರತೊಡಗಿದ್ದರು.

ಸಭೆಯಲ್ಲಿ ಯಾವ ತೊಂದರೆಯೂ ಆಗದೆಂದು ನಾನು ಭಾವಿಸುತ್ತೇನೆ. ಸೇನೆಯವರು ಭಾರೀ ಏರ್ಪಾಟು ಮಾಡಿದ್ದಾರಂತೆ!

ಅರೇ ತಮ್ಮಾ! ಅವೆಲ್ಲಾ ಬೊಗಳೆ. ತೊಂದರೆ ಯಾಕಾದೀತು? ನಾವೆಲ್ಲಾ ಶಾಂತಿಪ್ರೇಮಿಗಳು. ನಮಗಾವ ಅಧಿಕಾರವೂ ಇಲ್ಲವೇ?

ಹೆಚ್ಚು ಹೆಚ್ಚು ಜನರು ಸೇರಿ ಜನಸಂಧಣಿ ದಟ್ಟೈಸಿತು. ಆ ಪೈಕಿ ಚಿಕ್ಕ ಹುಡುಗರೂ, ತೀರ ಎಳೆಯ ಮಕ್ಕಳೂ ಇದ್ದರು.

ನಮ್ಮ ನಾಯಕರು ಕಳಿಸಿರುವ ಸಂದೇಶವೇನು ತಿಳಿಯೋಣ!

ಕಿಚ್ಲುರವರಿಗೆ ಜಯವಾಗಲಿ!

ಸತ್ಯಪಾಲರಿಗೆ ಜಯವಾಗಲಿ!

ಆ ದಿನ ವೈಶಾಖಿ ಹಬ್ಬದ ದಿನವೂ ಆಗಿತ್ತು. ಹೊಸ ವರ್ಷದ ಆರಂಭದ ದಿನ, ಅದರಲ್ಲೂ ಸಿಖ್ ಜನರಿಗೆ ತುಂಬ ಪವಿತ್ರವಾದ ದಿನ. ಆದ್ದರಿಂದ ಹಬ್ಬದ ರಜೆ ಕಳೆಯಲು ಬಂದಿದ್ದ ನೆರೆಹಳ್ಳಿಗಳ ರೈತರಿಂದ ನಗರ ತುಂಬಿತ್ತು. ಹತ್ತಿರದಲ್ಲೇ ಸ್ವರ್ಣಮಂದಿರ. ಪವಿತ್ರವಾದ ಕೊಳದಲ್ಲಿ ಮಿಂದು ವಿರಮಿಸಲು ಜಲಿಯನ್‌ವಾಲಾ ಬಾಗಿಗೆ ಬಂದಿದ್ದರು.

ಸಭೆ ಆರಂಭವಾಯಿತು. ಹಲವಾರು ಭಾಷಣಕಾರರು ಸಭೆಯಲ್ಲಿ ಮಾತನಾಡಿದರು.

ಗೆಳೆಯರೇ, ನಮ್ಮ ನಾಯಕ ಡಾ. ಕಿಚ್ಲುರವರನ್ನು ನಮ್ಮಿಂದ ಬೇರ್ಪಡಿಸಲಾಗಿದೆ. ಆದರೆ ಅವರು ನಮ್ಮ ಹೃದಯದಲ್ಲಿ ನೆಲೆಸಿದ್ದಾರೆ. ಆದ್ದರಿಂದಲೇ ಅವರು ದೈಹಿಕವಾಗಿ ಇಲ್ಲಿ ಇಲ್ಲದೇ ಹೋದರೂ ಅವರೇ ಈ ಸಭೆಯ ಅಧ್ಯಕ್ಷರಾಗಿರುತ್ತಾರೆ!

Sri Vidyabharathi Book Centre, Sringeri

Kan. ACK 358

CC-O. In Public Domain. Digitized by eGangotri







Sri Vidyabharathi Book Centre, Sringeri

CC-0. In Public Domain. Digitized by eGangotri

ಅನಂತರ ಡಯರ್ ಮತ್ತು ಹ್ಯಾಮಿಲ್ಟನ್ ಬಿಘ್. ಸ. ಬ್ರಿಗ್ಸ್ ಮೋಟಾರಿನಲ್ಲಿ ಹೊರಬರು. ಅವರ ಹಿಂದೆ ಎರಡು ಸಶಸ್ತ್ರ ಸಜ್ಜಿತ ವಾಹನಗಳು. ಅನಂತರ ಒಂದು ಪೋಲೀಸ್ ವಾಹನ. ಇದು ಹಾಲ್ ಬಜಾರ್, ಪೊವಾರಾ ಚೌಕಗಳನ್ನು ದಾಟಿತು.

ಬಾಗಿನ ಇಕ್ಕಟ್ಟಾದ ಪ್ರವೇಶದ್ವಾರದ ಬಳಿ-

ಆ ಪ್ರವೇಶದ್ವಾರ ತುಂಬ ಕಿರಿದು. ಸಶಸ್ತ್ರ ಸಜ್ಜಿತ ವಾಹನಗಳು ಒಳಗೆ ಹೋಗಲು ಸಾಧ್ಯವಿಲ್ಲ!

ಅನಿಷ್ಟ! ನಮ್ಮ ಮಿಷನ್‌ರಿಗಳಾಗಿದ್ದರೆ ಒಳಗಿರುವವರನ್ನು ಬೇಗ ಮುಗಿಸಬಹುದಾಗಿತ್ತು!

ಏನೇ ಆದರೂ ನಮ್ಮ ಸಶಸ್ತ್ರ ಪಡೆ ಬಹುಮಟ್ಟಿಗೆ ತೃಪ್ತಿಕರವಾಗಿ ಕೆಲಸ ಮಾಡಲು ಸಾಧ್ಯ!

Sri Vidyabharathi Book Centre, Sringeri

CC-O. In Public Domain. Digitized by eGangotri

ಡಯರ್ ಮತ್ತು ಬ್ರಿಗ್ಸ್ ತಮ್ಮ ದಳ-ದೊಡನೆ ಇಕ್ಕಟ್ಟಾದ ಪ್ರವೇಶದ್ವಾರದ ಬಳಿ ಹೋದರು. ಹಾದಿಯ ಕೊನೆ ಮುಟ್ಟಿದಾಗ ಅಲ್ಲಿ ಕಾಣಿಸಿದ್ದು ಭಾರಿ ಜನಸಮೂಹ.

ಬ್ರಿಗ್ಸ್, ಇಲ್ಲಿ ಎಷ್ಟು ಜನ ಸೇರಿರಬಹು-ದೆಂದು ನಿನ್ನ ಎಣಿಕೆ?

ಸುಮಾರು 5,000 ಜನ ಇದ್ದೀತೆಂದು ನನ್ನ ನಂಬಿಕೆ.

ಆದರೆ ಅದು ಕನಿಷ್ಠ 25,000 ಜನರಿದ್ದ ಸಭೆಯೆಂದು ಅನಂತರ ಸ್ಪಷ್ಟವಾಯಿತು.

ಮೂವತ್ತು ಸೆಕೆಂಡುಗಳ ಒಳಗಾಗಿ ಗೂರ್ಖಾ ಪಡೆಯವರನ್ನು ಎಡಭಾಗದಲ್ಲಿ ಮತ್ತು ಬಲೂಚಿಗಳನ್ನು ಬಲಭಾಗದಲ್ಲಿ ನಿಲ್ಲುವಂತೆ ಡಯರ್ ಏರ್ಪಾಟು ಮಾಡಿದ.

ಸುಮಾರು 5.15ರ ಸಮಯ. ಒಂಭತ್ತನೇ ಭಾಷಣಕಾರ "ವಕ್ತ್" ದೈನಿಕದ ಸಂಪಾದಕ ದುರ್ಗಾ-ದಾಸ್ ವೈದ್ ಭಾಷಣ ಮಾಡುತ್ತಿದ್ದ.

...ಸರ್ಕಾರದ ದಮನ ನೀತಿಯಿಂದ....

ಜನರ ಭೀತಿಗೊಂಡ ಕೂಗುಗಳಿಂದ ಅವನ ಭಾಷಣಕ್ಕೆ ತಡೆಯಾಯಿತು.

ಓ ಅವರು ಬಂದಿದ್ದಾರೆ! ನೋಡಿ ಬಂದಿದ್ದಾರೆ!

ಅಯ್ಯೋ ದೇವರೇ!

ಸಶಸ್ತ್ರ ಸೈನಿಕರು!

ಒಂದೆರೆಡು ಸೆಕೆಂಡುಗಳಲ್ಲಿ ಜನರಲ್ ಡಯರ್ ಆದೇಶವಿತ್ತ-

ಗುಂಡು ಹಾರಿಸಿ!

Sri Vidyabharathi Book Centre, Sringeri

ಜಲಿಯನ್‌ವಾಲಾ ಬಾಗ್
CC-0. In Public Domain. Digitized by eGangotri

ಬಾಂಬೆ ಉದುಳಿದಂತೆ ಕಂಡಿತು....

...ಆದರೆ ಜನರು ತಮ್ಮ ಕಣ್ಣುಗಳನ್ನೇ ನಂಬಲಿಲ್ಲ.

ಓಹೋ! ಹೋ! ಹುಸಿ ಗುಂಡುಗಳು!

ಅವು ಹುಸಿ ಗುಂಡುಗಳು!

ಆದರೆ ಹಲವಾರು ಮಂದಿ ಸತ್ತು ಬಿದ್ದು, ಬಹುಮಂದಿ ಗಾಯಗೊಂಡು ಉರುಳಿದಾಗ ಪರಿಸ್ಥಿತಿಯ ಭೀಕರತೆ ಸ್ಪಷ್ಟವಾಯಿತು.

ಅಯ್ಯೋ!

ಸೈನಿಕರು ಗುರುಡರಂತೆ ಸಿಕ್ಕಿಸಿಕ್ಕಿ ಓಡತೊಡಗಿದರು.

ಆದರೆ ಹೋಗುವುದಾದರೂ ಎಲ್ಲಿಗೆ? ಪ್ರವೇಶದ್ವಾರದಲ್ಲಿ ಬಂದೂಕುಧಾರಿ ಸಿಪಾಯಿಗಳು ನಿಂತಿದ್ದರು.

ಅತ್ತ, ಇತ್ತ, ಎಡಕ್ಕೆ, ಬಲಕ್ಕೆ, ಸಿಕ್ಕಿದೆಡೆ ಜನ ಓಡತೊಡಗಿದಾಗ ಸೈನಿಕರು ತಮ್ಮ ಬಂದಾದ ಬಂದೂಕುಗಳಲ್ಲಿ ಗುಂಡು ತುಂಬಿ ಪುನಃ ಹಾರಿಸಲು ಮೊದಲಿಟ್ಟರು. ಅತ್ಯಧಿಕ ಜನರನ್ನು ಕೊಲ್ಲಲು ಸಾಧ್ಯವಾಗುವಂತೆ ಕೆಳದುಬ್ಬದಲ್ಲಿ ಗುಂಡು ಹಾರಿಸಿದರು.

Sri Vidyaranarathi Book Centre, Sringeri

CC-O. In Public Domain. Digitized by eGangotri

ಜಲಿಯನ್‌ವಾಲಾ ಬಾಗನ್ನು ಸುತ್ತುವರೆದಿದ್ದ ಮನೆಗಳ ನಡುವೆ ನಾಲ್ಕೈದು ಜನ ತೂರಿಕೊಳ್ಳುವಷ್ಟು ಸಂದುಗಳಿದ್ದವು. ಜನರು ಅವುಗಳ ಮೂಲಕ ಪಾರಾಗಲು ಪ್ರಯತ್ನಿಸಿದರು.

ಡಯರ್ ತಿರ್ಮಾನಿಸಿದಂತೆ ನೇರವಾಗಿ ಇಂಥ ಸಂದುಗಳ ಮೇಲೆಯೇ ಗುಂಡಿನ ಮಳೆಯಾಯಿತು.

ಜನರು ಉರುಳುತ್ತಲೇ ಇದ್ದರು. ತಿದರೂ ನೋಲಿಬಾರು ನಿಲ್ಲಲೇ ಇಲ್ಲ.

ಹತ್ತು ನಿಮಿಷಗಳನಂತರ ಗುಂಡಿನ ದಾಳಿ ನಿಂತಾಗ ಅಲ್ಲಿ ಎಲ್ಲೆಲ್ಲೂ ಹೆಣಗಳ ರಾಶಿಯೇ ಬಿದ್ದಿತ್ತು.

ಕನಿಷ್ಠ ಒಂದು ಸಾವಿರ ಜನ ಸತ್ತರು. ಇದಕ್ಕೆ ಮೂರುಪಟ್ಟು ಜನರು ಗಾಯಗೊಂಡರು.

ಗಾಯಗೊಂಡವರು ನರಳುತ್ತಿದ್ದರು.

ನೀರು!

ನೀರು!

ತಿದರೆ ಸೈನಿಕರು ಲಕ್ಷಿಸದೆ ಹಿಂದಿರುಗಿದರು.

ರಣರಂಗದಲ್ಲಿ ಕೂಡ ಗಾಯಗೊಂಡ ಶತ್ರು ಸೈನಿಕರಿಗೆ ಪ್ರಥಮ ಚಿಕಿತ್ಸೆ ನೀಡಲಾಗುತ್ತದೆ. ತಿದರೆ ಜಲಿಯನ್‌ವಾಲಾ ಬಾಗಿನ ನಿರಾಯುಧ ಜನರನ್ನು ದುರವಸ್ಥೆಯಲ್ಲೇ ಸಾಯಲು ಬಿಡಲಾಯಿತು.

CC-O. In Public Domain. Digitized by eGangotri

ಇರುಳು ಕವಿದಾಗ ಜಲಿಯನ್‌ವಾಲಾ ಬಾಗ್ ಮಡಿದ ಮತ್ತು ಗಾಯಗೊಂಡ ಜನರು ಬಿದ್ದಿದ್ದ ರಣಭೂಮಿಯಂತೆ ಕಾಣುತ್ತಿತ್ತು. ಕೆಲವರು ತಮ್ಮ ಬಂಧುಗಳನ್ನು ಹುಡುಕುವ ಧೈರ್ಯ ಮಾಡಿದರು.

ಆದರೆ ಕರ್ಫ್ಯೂ ಅವಧಿಯಾದ ರಾತ್ರಿ 8 ಗಂಟೆಯನಂತರ ಮತ್ತೆ ಗುಂಡಿನ ದಾಳಿ ನಡೆದೀತೆಂಬ ಅಂಜಿಕೆಯಿಂದ ಅವರು ಬೇಗ ಹಿಂದಿರುಗಬೇಕಾಯಿತು.

ಆ ರಾತ್ರಿ ವಿಜಯೋನ್ಮತ್ತ ಡಯರ್ ನಗರದಲ್ಲಿ ಸಂಚರಿಸಿ ತನ್ನ ಕರ್ಫ್ಯೂ ಆಜ್ಞೆಯ ಪಾಲನೆಯನ್ನು ವೀಕ್ಷಿಸಿದ.

ಎಲ್ಲೆಲ್ಲೂ ನಿಶ್ಶಬ್ಧ! ಒಂದು ಸರಪಿಳ್ಳೆಯೂ ಇಲ್ಲ! ನಾನು ಗೆದ್ದೆ!

ಈಗ ಈ ಜನರಲ್ಲಿ ಬ್ರಿಟಿಷ್ ಬಲದ ಅರಿವಿ ತಿಳಿಯಿತು. ಮತ್ತೆ ಅವರು ತಮ್ಮ ಹಳೆಯ ತಂತ್ರಗಳನ್ನು ಹೂಡುವರೇನು? ನಮ್ಮ ಹೆಂಗಸರ ಅಪಹರಣ, ಬ್ಯಾಂಕ್ ಲೂಟಿ ಮಾಡುವ ಧೈರ್ಯ ಉಳಿದಿದೆಯೇ?

ಏಪ್ರಿಲ್ 14 ರಂದು ಜಿಲ್ಲಾಧಿಕಾರಿ ಇರ್ವಿಂಗ್ ಲಾಹೋರಿನಲ್ಲಿದ್ದ ಲೆ॥ ಗವರ್ನರ್ ಓ'ಡ್ವೈಯರ್‌ನಿಗೆ ಒಂದು ಪತ್ರ ಕಳುಹಿಸಿದ.

"ಸೈನಿಕರು ಮುನ್ನೆಚ್ಚರಿಕೆ ನೀಡದೆ ಗುಂಡು ಹಾರಿಸಿದರು. ಹತ್ತು ನಿಮಿಷಗಳ ಕಾಲ ಗುಂಡಿನ ದಾಳಿ ನಡೆಯಿತು. ನಾವಲ್ಲಿ ಹಾಜರಿರಲಿಲ್ಲವೆಂದು ವಿಷಾದ ವೆನಿಸಿದೆ....

ಹೂಂ!

ಹೊನೆಗೂ ಇರ್ವಿಂಗ್‌ನಿಗೆ ತನ್ನ ನಾಗರಿಕ ಆಡಳಿತವನ್ನು ಸೈನ್ಯಕ್ಕೆ ವಹಿಸುವುದರ ಅರ್ಥವೇನೆಂದು ತಿಳಿಯಿತು.

ಲೆ॥ ಗವರ್ನರನಿಗೆ ಜನರಲ್ ಡಯರ್‌ನಿಂದಲೂ ಒಂದು ಸಂದೇಶ ತಲಪಿತು.

"ಪರಿಸ್ಥಿತಿ ಹತೋಟಿಯಲ್ಲಿದೆ. 200 ಜನರು ಸತ್ತಿದ್ದಾರೆ. ಅಮೃತಸರದಲ್ಲಿ ಎಲ್ಲ ಶಾಂತವಾಗಿದೆ."

ಒಳ್ಳೆಯದು!

Sri Vidyabharathi Book Centre, Sringeri

CC-O. In Public Domain. Digitized by eGangotri

ಜಲಿಯನ್‌ವಾಲಾ ಬಾಗಿನಲ್ಲಿ ಸಂಭವಿಸಿದ್ದನ್ನು ನ್ಯಾಯ ದುಷ್ಟಿಯುಳ್ಳ ಬ್ರಿಟಿಷರೇ "ಘೋರಕೃತ್ಯ" ಎಂದು ಕರೆದರು. ಆದರೂ ಬ್ರಿಟಿಷ್ ಸರ್ಕಾರ ಇದರಿಂದ ವಿಚಲಿತವಾಗಲಿಲ್ಲ. ಕೃತ್ಯದ "ಶೌರ್ಯ"ವನ್ನು ಮರೆಮಾಚಲು ಎಲ್ಲ ಪ್ರಯತ್ನಗಳು ನಡೆದವು.

ಕೇವಲ 200 ಮಂದಿ ಸತ್ತರೇ! ಇದೇನು ಹೊಂದಲ? ನಾವು ಮತ್ತೆ "ಅತಿರೇಕ"ಕ್ಕೆ ಅವಕಾಶ ತಪ್ಪಿಸಿದ್ದೇವೆ. ಒಂದು ದಂಗೆಯನ್ನು ಅಡಗಿಸಿದ್ದೇವೆ.

ಆದರೆ ಅನಂತರ ಹೊತ್ತಾದಂತೆ ಕನಿಷ್ಠ 1000 ಮಂದಿ ಸತ್ತು 3000 ಜನರು ಗಾಯಗೊಂಡಿದ್ದರು.

ಹಲವು ಬ್ರಿಟಿಷ್ ಹಿರಿಯಾಧಿಕಾರಿಗಳು ಡಯರ್‌ನ ಕೃತ್ಯವನ್ನು ಶ್ಲಾಘಿಸಿದರು.

ಅಮೃತಸರದಲ್ಲಿ ಮುಂದೆ ಯಾವುದೇ ಬಗೆಯ ತೊಂದರೆಯೂ ಉಂಟಾಗಲಿಲ್ಲ - ಎಂಬುದೇ ಜನರಲ್ ಡಯರ್‌ನ ಕಾರ್ಯಾಚರಣೆಯ ವಿವೇಕಕ್ಕೆ ಸಾಕ್ಷಿ.

ಇಡೀ ಉತ್ತರ ಭಾರತದಲ್ಲಿ ಸಾರ್ವತ್ರಿಕವಾದ ದಂಗೆಯನ್ನು ಡಯರ್ ನಿವಾರಿಸಿದ್ದಾನೆ!

ಜಲಿಯನ್‌ವಾಲಾ ಬಾಗ್ ಪ್ರಕರಣವನ್ನೇ ಅಡಗಿಸಿಬಿಡಲು ಬ್ರಿಟಿಷರು ಪ್ರಯತ್ನಿಸಿದರು. ಭಾರತೀಯ ಪತ್ರಿಕೆಗಳ ಮೇಲೆ ಹತೋಟಿ ಹೇರಿದರು. ಪಂಜಾಬಿಗೆ ಹೋಗಿಬರಲು ಮುಕ್ತ ಅವಕಾಶವಿರಲಿಲ್ಲ. ಆದರೂ ಮೌಖಿಕವಾಗಿಯೇ ಎಲ್ಲ ಕಡೆಯೂ ವರದಿ ಹಬ್ಬಿತು.

ಬ್ರಿಟಿಷರ ಹೊಸತಿಗೆ ಜಲಿಯನ್‌ವಾಲಾ ಬಾಗ್ ಪ್ರಕರಣದಿಂದ ತುಂಬಾ ಧಕ್ಕೆ ಒದಗಿತು. ಬ್ರಿಟಿಷರು ಯಾವಾಗಲೂ ನ್ಯಾಯಪರರೆಂದು ನಂಬಿದ್ದ ಹೊಟೇಲಾಲ ನೆಹರೂರ ನಂಬಿಕೆ ಕುಸಿಯಿತು.

ನಮ್ಮ ನಾಯಕರ ಭಾಷಣ ಕೇಳಲು ಬಂದ ನಿರಪರಾಧಿಗಳನ್ನು ಅಪರಾಧಿಗಳಂತೆ ನಡೆಸಿಕೊಳ್ಳುವುದೇ? ಅಪರಾಧಿಗಳು ಮಾಡಿದ ಕೃತ್ಯಕ್ಕೆ ಜನಸಾಮಾನ್ಯರನ್ನು ಬಲಪಶುಗಳನ್ನಾಗಿ ಮಾಡುವುದೇ?

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಸ್ಥಿತಿಯನ್ನು ಕುರಿತು ತನಿಖೆ ಮಾಡಲು ಕಾಂಗ್ರೆಸ್ ಪ್ರಮುಖರು ಪಂಜಾಬ್ ಪ್ರವೇಶದ ಹಕ್ಕಿಗಾಗಿ ತಗಾದೆ ಮಾಡಿದರು. ಕೊನೆಗೂ ಅನುಮತಿ ದೊರೆತು ಸ್ಥಳ ಸನ್ನಿವೇಶಗಳನ್ನು ಕಂಡಾಗ ಅವರಿಗೆಲ್ಲ ದಿಗ್ಭ್ರಮೆ ಆಯಿತು.

ಗೋಡೆಗಳ ಮೇಲಿರಿವ ಗುಂಡಿನ ಗುರ್ತುಗಳಿಂದ ಜನರ ಗುಂಪು ದಟ್ಟವಾಗಿದ್ದ ದಿಕ್ಕಿಗೇ ಡಯರ್ ಗುರಿ ಇಟ್ಟಿದ್ದನೆಂದು ಕಾಣುತ್ತದೆ! ಅವನು ಜನರನ್ನು ಸುಮ್ಮನೆ ಉರುಳಿಸಿದ್ದಾನೆ!

ಅವನು ನಿಂತ ಸ್ಥಳದಿಂದ ಜನ ಸಮೂಹಕ್ಕೆ ತಪ್ಪಿಸಿಕೊಳ್ಳಲು ಬೇರೆ ಎಡೆಯೇ ಇರಲಿಲ್ಲವೆಂಬುದನ್ನು ಡಯರ್ ನೋಡಿದ್ದಾನೆ. ಅವರನ್ನೆಲ್ಲ ಒಳಗೆ ಸಿಲುಕಿಸಿ ಹೆಂಗಸರು ಮಕ್ಕಳೆನ್ನದೆ ಅವರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿದನೆ?

ಖಾಸಗಿ ವಿಚಾರಣಾ ಆಯೋಗದ ಪ್ರಮುಖ ಸದಸ್ಯರಲ್ಲಿ ಒಬ್ಬರಾಗಿದ್ದ ಗಾಂಧೀಜೀ ಹೇಳಿದರು.

"ನಿರಪರಾಧಿ, ನಿರಾಯುಧ ಜನರ ಮೇಲೆ ಲೆಕ್ಕಾಚಾರ ಹಾಕಿ ನಡೆಸಿದ ಅಮಾನುಷ ಕೃತ್ಯ ಜಲಿಯನ್‌ವಾಲಾ ಕಣ್ಣೊಲೆ."

ಈ ಪ್ರಕರಣದ ಸುದ್ದಿ ಭಾರತದ ಉದ್ದಗಲಕ್ಕೂ ಹರಡಿದಂತೆಲ್ಲ ಒಂದು ಸಾರ್ವತ್ರಿಕ ಒತ್ತಾಯ ಮೂಡಿತು. ಬ್ರಿಟಿಷ್ ಸರಕಾರಕ್ಕೆ ವಾಸ್ತವಾಂಶಗಳನ್ನು ಹೆಚ್ಚು ಕಾಲ ಅಡಗಿಸಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಸರ್ಕಾರ ತನಿಖಾ ಸಮಿತಿಯನ್ನು ರಚಿಸಲೇ ಬೇಕಾಯಿತು. ಅದರ ಹೆಸರು ಹಂಟರ್ ಸಮಿತಿ.

ಗುಂಡು ಹಾರಿಸದೆ ಜನ ಸಮೂಹವನ್ನು ಚೆದುರಿಸಲು ನಿನಗೆ ಸಾಧ್ಯವಿತ್ತೇ?

ಸ್ವಲ್ಪ ಕಾಲದವರೆಗೆ ಜನರನ್ನು ನಾನು ಚೆದುರಿಸಬಹುದಿತ್ತು. ಆದರೆ ಅವರೆಲ್ಲ ಮತ್ತೆ ಬಂದು ಸೇರಿ ನನ್ನನ್ನು ಅಪಹಾಸ್ಯ ಮಾಡುತ್ತಿದ್ದರು. ನಾನು ಮೂರ್ಖನಾಗುತ್ತಿದ್ದೆ.

ಹಂಟರ್ ಸಮಿತಿ ಎರಡು ಕಾರಣಗಳಿಗಾಗಿ ಡಯರ್‌ನನ್ನು ಆಕ್ಷೇಪಿಸಿತು. ಮುನ್ನೆಚ್ಚರಿಕೆ ಕೊಡದೆ ಡಯರ್ ಗುಂಡು ಹಾರಿಸಿದ್ದಲ್ಲದೆ, ಜನ ಚೆದುರತೊಡಗಿದ ಮೇಲೂ ಗುಂಡು ಹಾರಿಸುತ್ತಲೇ ಇದ್ದ.

Sri Vidyabharathi Book Centre, Sringeri

Kan. ACK 358

CC-O. In Public Domain. Digitized by eGangotri



Sri Vidyabharathi Book Centre, Sringeri

Kan. ACK 358

CC-O. In Public Domain. Digitized by eGangotri

ಸೂಕ್ತ ಸಮಯಕ್ಕೆ
ಇದೇ ಸೂಕ್ತ ಯೋಜನೆ...

ಯುನಿಟ್ ಟ್ರಸ್ಟ್‌ನ ಮಕ್ಕಳ ಉಪಹಾರ ವೃದ್ಧಿ ನಿಧಿ 1986.



ನಿಮ್ಮ ಪ್ರೀತಿಯ ಮಗುವಿಗೆ ನಿಮ್ಮ ಪ್ರೀತಿಗೆ ಸರಿಸಾಟಿಯಾಗುವಂತೆ ನೀವು ನೀಡಬಹುದಾದ ಅತಿ ಅಮೂಲ್ಯ ಉಪಹಾರವೆಂದರೆ ಮಕ್ಕಳ ಉಪಹಾರ ವೃದ್ಧಿ ನಿಧಿ. (children's gift growth fund) 6 ವರ್ಷಗಳಲ್ಲಿ ನಿಮ್ಮ ಈ ಉಪಹಾರ ದ್ವಿಗುಣವಾಗುತ್ತದೆ. ಮುಂದೆ, 21 ವರ್ಷಗಳಲ್ಲಿ 12 ಪಟ್ಟು ವೃದ್ಧಿಯಾಗುತ್ತದೆ.

ಯೋಜನೆಯ ವೈಶಿಷ್ಟ್ಯಗಳು

- ಈ ಯೋಜನೆಯಲ್ಲಿ ಯಾವುದೇ ವಯಸ್ಕರು, ಪಾಲಕರು, ಸಂಬಂಧಿಕರು ಅಥವಾ ಸ್ನೇಹಿತರು 15 ವರ್ಷ ಕಡಿಮೆ ವಯಸ್ಸಿನ ಯಾವುದೇ ಮಗುವಿಗೆ ಉಪಹಾರ ನೀಡಬಹುದು. ವಯಸ್ಸಿನ ಬಗ್ಗೆ ಯಾವ ಪುರಾವೆಯೂ ಬೇಕಿಲ್ಲ.
- ನಿಮ್ಮ ಉಪಹಾರಕ್ಕೆ 12.5% ಡಿವಿಡೆಂಡ್ ಖಾತ್ರಿ. ಪ್ರತಿ ವರ್ಷ, ಆ ಹಣವನ್ನು ಪುನಃ ತೊಡಗಿಸಲಾಗುತ್ತದೆ. ಅದಕ್ಕೆ 5 ವರ್ಷಗಳಿಗೊಮ್ಮೆ ದೊರೆಯುವ ಬೋನಸ್ ಡಿವಿಡೆಂಡನ್ನೂ ಸೇರಿಸಲಾಗುತ್ತದೆ.
- ಮಗುವಿಗೆ 21 ವರ್ಷ ತುಂಬುವಾಗ ಉಪಹಾರ ಸಿದ್ಧ. 18 ವರ್ಷ ಹರೆಯದಲ್ಲಿಯೂ ಉಪಹಾರ ಪಡೆಯುವ ಅವಕಾಶ. ಅಷ್ಟರವರೆಗೆ ಪಾಲಕರಾಗಲಿ, ಮಗುವಾಗಲಿ ಯಾರು ಕೂಡಾ ಆ ಹಣವನ್ನು ಮುಟ್ಟುವಂತಿಲ್ಲ.
- ಪ್ರತಿ ಯುನಿಟ್‌ನ ಅಂಕಿತ ಬೆಲೆ ರೂ. 10/- ಯುನಿಟ್‌ಗಳು ಜೂನ್ 14, 1986ರ ವರೆಗೆ ಸಮಮೂಲ್ಯಕ್ಕೆ ದೊರೆಯುತ್ತವೆ. 10 ಯುನಿಟ್ಸ್‌ಗಳ ಗುಣಕಗಳಿಗೆ ಅರ್ಜಿ ಪತ್ರಗಳನ್ನು ಸಲ್ಲಿಸಬಹುದು. ನೀವು ಅರ್ಜಿ ಸಲ್ಲಿಸಬಹುದಾದ ಕನಿಷ್ಠ ಯುನಿಟ್‌ಗಳು 50 ಗರಿಷ್ಠ ನೀವು ಎಷ್ಟು ಯುನಿಟ್‌ಗಳನ್ನೂ ಕೊಳ್ಳಬಹುದು.

1986ರ ವಿತ್ತ ಕಾನೂನಿನ ಮೇರೆಗೆ ರೂ. 20,000/-ದ ವರೆಗೆ ಉಪಹಾರವನ್ನು ಕರಮುಕ್ತವಾಗಿಮವ ಪ್ರಸ್ತಾಪವಿದೆ.

ಅರ್ಜಿ ಪತ್ರಗಳು, ಯುನಿಟ್ ಟ್ರಸ್ಟ್ ಆಫೀಸು, ಮುಖ್ಯ ಪ್ರತಿನಿಧಿಗಳು ಅಥವಾ ಯುನಿಟ್ ಟ್ರಸ್ಟ್‌ನ ವಿಜೆಂಟರು ಮತ್ತು ಕಮರ್ಷಿಯಲ್ ಬ್ಯಾಂಕುಗಳ ಎಲ್ಲಾ ಶಾಖೆಗಳಲ್ಲಿ ದೊರೆಯುತ್ತವೆ.

ಯುನಿಟ್ ಟ್ರಸ್ಟ್ ಆಫ್ ಇಂಡಿಯಾ

ನಿಮ್ಮ ಹಣ ವೃದ್ಧಿಸುತ್ತಲೇ ಇರುತ್ತದೆ-12 ಪಟ್ಟು, ಅಷ್ಟೇ ಅಲ್ಲ; ಜೊತೆಗೆ ಬೋನಸ್ ಡಿವಿಡೆಂಡ್ ಕೂಡಾ.

ದಯವಿಟ್ಟು ನನಗೆ ಉಚಿತ CGGF ಪುಸ್ತಿಕೆ ಕಳುಹಿಸಿರಿ :

ಹೆಸರು : _____

ವಿಳಾಸ : _____

_____

_____

ಕೂಪನನ್ನು ಇವರಿಗೆ ಕಳುಹಿಸಿರಿ :
ಮುಂಬೈ, ಪೋ. ಬಾ. 11410 ಟೆಲಿ : 256887
ಕಲ್ಕತ್ತಾ, ಪೋ. ಬಾ. 60 ಟೆಲಿ : 239391[illegible].
ಮದ್ರಾಸು, ಪೋ. ಬಾ. 5063 ಟೆಲಿ : 27433
ನವದೆಹಲಿ, ಪೋ. ಬಾ. 5 ಟೆಲಿ : 3318638.

Sista's-UTI-181/86 KAN

Sri Vidyabharathi Book Centre, Sringeri

CC-O. In Public Domain. Digitized by eGangotri

Put Parle on your school books— and in your lunchbox too!

PARLE
Melody
Chocolate Toffs

PARLE
POPPINS

PARLE Gluco

NAME _____
CLASS _____ DIV. _____
SUBJECT _____
SCHOOL _____

PARLE Melody Chocolate Toffs

NAME _____
CLASS _____ DIV. _____
SUBJECT _____
SCHOOL _____

PARLE Gluco

NAME _____
CLASS _____ DIV. _____
SUBJECT _____
SCHOOL _____

PARLE POPPINS

NAME _____
CLASS _____ DIV. _____
SUBJECT _____
SCHOOL _____

PARLE POPPINS

NAME _____
CLASS _____ DIV. _____
SUBJECT _____
SCHOOL _____

PARLE Melody Chocolate Toffs

everest 85 PP/334

Sri Vidyabharathi Book Centre, Sringeri